# ಕರ್ನಾಟಕದಲ್ಲಿ ಶ್ರೀರಾಮಕೃಷ್ಣ ಆಶ್ರಮಗಳು

**ಸರಗೂರು ರಮೇಶ್**

ಕರ್ನಾಟಕದಲ್ಲಿ ರಾಮಕೃಷ್ಣ ಮಹಾಸಂಘದ ಹಲವು ಶಾಖಾಕೇಂದ್ರಗಳು ಆರಂಭವಾಗಿ, ಅಧ್ಯಾತ್ಮ ಹಾಗೂ ಸೇವಾಕಾರ್ಯಗಳಲ್ಲಿ ನಿರತವಾಗಿವೆ. ಪ್ರಮುಖ ಶಾಖಾಕೇಂದ್ರಗಳ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ. ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಆಂಗ್ಲ ಉಪನ್ಯಾಸಕರು; ಅವರು ಉತ್ತಮ ಭಾಷಣಗಾರರು ಹಾಗೂ ಬರಹಗಾರರಾಗಿದ್ದಾರೆ.

ಶ್ರೀರಾಮಕೃಷ್ಣರ ಲೋಕಕಾರುಣ್ಯದ ಅಮೃತಕೃಪೆಯು ಶ್ರೀರಾಮಕೃಷ್ಣ ಮಹಾಸಂಘದ ಶಾಖಾಕೇಂದ್ರಗಳಾಗಿ ದಕ್ಷಿಣ ಭಾರತದ ಕರ್ನಾಟಕದಲ್ಲಿ ೨೦ನೆಯ ಶತಮಾನದ ಆರಂಭದಿಂದಲೇ ಹರಿದು ವಿಸ್ತರಿಸಲಾರಂಭಿಸಿದುದನ್ನು ನಾವು ಕಾಣುತ್ತೇವೆ. ರಾಮಕೃಷ್ಣ ಭಾವಧಾರೆಯು ಕನ್ನಡಿಗರ ಹೃನ್ಮನಗಳನ್ನು ಪ್ರವೇಶಿಸಿ, ಆತ್ಮೋದ್ದೀಪಕ ಕಾರ್ಯದಲ್ಲಿ ನಿರತವಾದುದು ಒಂದು ಮಹತ್ತರವಾದ ಐತಿಹಾಸಿಕ ಬೆಳವಣಿಗೆ. ಅಂತಹ ರಾಮಕೃಷ್ಣ ಮಹಾಸಂಘದ ಕರ್ನಾಟಕದ ಪ್ರಧಾನ ಶಾಖೆಗಳ ಬಗೆ ಈಗ ಅರಿತುಕೊಳ್ಳುವುದು ಆವಶ್ಯಕವೂ ಔಚಿತ್ಯಪೂರ್ಣವೂ ಆಗಿದೆ.

## ಬೆಂಗಳೂರಿನ ರಾಮಕೃಷ್ಣ ಮಠ

ಸ್ವಾಮಿ ವಿವೇಕಾನಂದರೊಡನೆಯೇ ಸಂಸರ್ಗ ಹೊಂದಿದ್ದ ಕೆಲವು ಗಣ್ಯರು ೧೯೦೧ರಲ್ಲಿ ಬೆಂಗಳೂರಿನಲ್ಲಿ 'ವೇದಾಂತ ಸೊಸೈಟಿ'ಯನ್ನು ಆರಂಭಿಸಿದ್ದರು. ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ರಾಮಕೃಷ್ಣಾನಂದರು ೧೯೦೩ರಲ್ಲಿ ಬೆಂಗಳೂರಿಗೆ ಆಗಮಿಸಿದಾಗ, ರಾಮಕೃಷ್ಣ ಮಹಾಸಂಘದ ಶಾಖೆಯೊಂದನ್ನು ಸ್ಥಾಪಿಸುವ ವಿಷಯ



ಚರ್ಚಿಸಲ್ಪಟ್ಟಿತು. ೧೯೦೪ರಲ್ಲಿ ಅವರು ಮತ್ತೊಮ್ಮೆ ಬಂದರು. ಆಗ 'ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್'ಅನ್ನು ಆರಂಭಿಸಲಾಯಿತು. ಅಂದಿನ ಮೈಸೂರು ಸರ್ಕಾರವು ಬಸವನಗುಡಿ ರಸ್ತೆಯಲ್ಲಿ ಈ ಉದ್ದೇಶಕ್ಕಾಗಿ ವಿಶಾಲ ನಿವೇಶನ ಕೊಟ್ಟಿತು. ಸ್ವಾಮಿ ವಿವೇಕಾನಂದರ ಶಿಷ್ಯರಾದ ಸ್ವಾಮಿ ಆತ್ಮಾನಂದರು ಬೆಂಗಳೂರು ರಾಮಕೃಷ್ಣ ಮಠದ ಪ್ರಥಮ ಅಧ್ಯಕ್ಷರಾಗಿದ್ದರು. ಮೊದಲಿಗೆ ಆಶ್ರಮ ವೀರಸ್ವಾಮಿ ಮೊದಲಿಯಾರ್ ಬಂಗ್ಲೆಯ ಒಂದು ಬಾಡಿಗೆ ಮನೆಯಲ್ಲಿ ಇತ್ತು. ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಅಭೇದಾನಂದರು ೧೯೦೮ರ ಆಗಸ್ಟ್ ೨೦ರಂದು ಬಸವನಗುಡಿ ರಸ್ತೆಯ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿದರು. ರಾಮಕೃಷ್ಣ ಮಹಾಸಂಘದ ಪ್ರಥಮ ಅಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರು ೧೯೦೯ರ ಜನವರಿ ೨೦ ರಂದು ಕಟ್ಟಡ ಉದ್ಘಾಟಿಸಿದರು; ಶ್ರೀರಾಮಕೃಷ್ಣರ ಭಾವಚಿತ್ರವನ್ನೂ ಅನಾವರಣ ಮಾಡಿದರು.

೧೯೧೧ರ ಮಾರ್ಚ್ ೨೪ರಂದು ಶ್ರೀಮಾತೆ ಶಾರದಾದೇವಿಯವರು ಈ ಆಶ್ರಮಕ್ಕೆ ಆಗಮಿಸಿ ಕೆಲವು ದಿನ ಉಳಿದಿದ್ದರು. ಶ್ರೀಮಾತೆಯವರ ದಿವ್ಯಸಾನ್ನಿಧ್ಯವನ್ನೂ, ಪಾದಸ್ಪರ್ಶವನ್ನೂ ಪಡೆದ ಪುಣ್ಯಕೇಂದ್ರ ಬಸವನಗುಡಿ ರಾಮಕೃಷ್ಣ ಮಠ. ಈ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಯತೀಶ್ವರಾನಂದರು ೧೯೫೩ರ ಏಪ್ರಿಲ್‌ನಲ್ಲಿ ರಾಷ್ಟ್ರನಿರ್ಮಾಣಕ್ಕೆ ತನ್ನದೇ ವಿಶಿಷ್ಟ ಕೊಡುಗೆ ನೀಡಲು 'ವಿವೇಕಾನಂದ ಬಾಲಕ ಸಂಘ'ವನ್ನು ಆರಂಭಿಸಿದರು. ೧೯೪೪ರಲ್ಲಿ ಕಾಲೇಜು ವಿದ್ಯಾರ್ಥಿಗಳ ವಸತಿ ಸೌಕರ್ಯಕ್ಕಾಗಿ 'ಶ್ರೀರಾಮಕೃಷ್ಣ ವಿದ್ಯಾರ್ಥಿ ಮಂದಿರ' ಎಂಬ ವಿದ್ಯಾರ್ಥಿ ನಿಲಯವನ್ನು ಆರಂಭಿಸಲಾಯಿತು. ಶ್ರೀರಾಮಕೃಷ್ಣರ ನಿತ್ಯ ಪೂಜೆ, ಆರತಿ, ಭಜನೆ, ನಿಗದಿತ ದಿನಗಳಂದು ಆಧ್ಯಾತ್ಮಿಕ ಪ್ರವಚನಗಳು, ದಿವ್ಯತ್ರಯರ ಜಯಂತ್ಯುತ್ಸವಗಳು, ಸಾರ್ವಜನಿಕ ಗ್ರಂಥಾಲಯ, ಶ್ರೀರಾಮಕೃಷ್ಣ-ವಿವೇಕಾನಂದ ವೇದಾಂತ ಸಾಹಿತ್ಯ ಮತ್ತು ಆಧ್ಯಾತ್ಮಿಕ ಸದ್ಗ್ರಂಥಗಳ ಪ್ರಕಟಣೆ ಮತ್ತು ಮಾರಾಟ ಇತ್ಯಾದಿ ಕಾರ್ಯಚಟುವಟಿಕೆಗಳಿಂದ ಆಶ್ರಮವು ಭಕ್ತರ ಬಾಳನ್ನು ಬೆಳಗುತ್ತ ಶ್ರದ್ಧಾಭಕ್ತಿಗಳನ್ನು ಉದ್ದೀಪಿಸುತ್ತಿದೆ. ಸರಿ ಸುಮಾರು ೧೩ ದಶಕಗಳಿಂದ ದಿವ್ಯತ್ರಯರ ಲಕ್ಷಾಂತರ ಮಂದಿ ಭಕ್ತರು ತಮ್ಮ ಬಾಳಿನಲ್ಲಿ ಆಧ್ಯಾತ್ಮಿಕತೆಯ ಸತ್ಯದ ಹಾದಿಯಲ್ಲಿ ಮುನ್ನಡೆಯಲು ದಾರಿತೋರುತ್ತಿರುವ ಸ್ಫೂರ್ತಿಕೇಂದ್ರವಾಗಿದೆ.

## ಶ್ರೀರಾಮಕೃಷ್ಣ ಆಶ್ರಮ, ಮೈಸೂರು

೧೮೯೨ರ ನವೆಂಬರ್‌ನಲ್ಲಿ ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಮೈಸೂರಿಗೆ ಭೇಟಿ ನೀಡಿ, ದಿವಾನ್ ಶೇಷಾದ್ರಿ ಅಯ್ಯರ್ ಅವರ ಮುಖಾಂತರ ಅಂದಿನ ಮಹಾರಾಜರನ್ನು ಭೇಟಿಯಾಗಿದ್ದರು. ೧೮೯೪ರ ಆಗಸ್ಟ್‌ನಲ್ಲಿ ಶಿಷ್ಯ ಅಳಸಿಂಗ ಪೆರುಮಾಳ



ರಿಗೆ ಸ್ವಾಮೀಜಿಯವರು ತಾವು ಬರೆದ ಪತ್ರದಲ್ಲಿ, 'ಭವಿಷ್ಯದಲ್ಲಿ ಮೈಸೂರು ನಮ್ಮ ಕಾರ್ಯದ ಒಂದು ಪ್ರಮುಖ ಕೇಂದ್ರವಾಗುತ್ತದೆ' ಎಂದು ಉಲ್ಲೇಖಿಸಿದ್ದಾರೆ. ತದನಂತರ ೧೯೦೩ರಲ್ಲಿ ಸ್ವಾಮಿ ರಾಮಕೃಷ್ಣಾನಂದರು ಮತ್ತು ೧೯೦೬ರಲ್ಲಿ ಸ್ವಾಮಿ ಅಭೇದಾನಂದರು ಮೈಸೂರು ನಗರಕ್ಕೆ ಭೇಟಿ ನೀಡಿದ್ದರು. ಮೈಸೂರಿನ ಭಕ್ತವೃಂದವು ೧೯೧೭ರಲ್ಲಿ 'ರಾಮಕೃಷ್ಣ ಸಮಾಜ' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಜಯಂತಿ  ಉತ್ಸವಗಳನ್ನು ಆಚರಿಸುತ್ತಾ ಆದಿ ಕರ್ನಾಟಕ ಜನಾಂಗದ ಏಳಿಗೆಗಾಗಿ ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿತ್ತು. ಶ್ರೀಮಾತೆ ಶಾರದಾದೇವಿಯವರ ಶಿಷ್ಯರಾದ ಸ್ವಾಮಿ ಶ್ರೀವಾಸಾನಂದರು ೧೯೨೫ರಲ್ಲಿ ಮೈಸೂರಿಗೆ ಬಂದು, ರಾಮಕೃಷ್ಣ ಸಮಾಜದ ಸಭೆಯಲ್ಲಿ ಭಕ್ತರನ್ನು ಕುರಿತು ಭಾಷಣ ಮಾಡಿದರು. ಆಗ ಜನರಿಗೆ ಮೈಸೂರಿನಲ್ಲಿ ರಾಮಕೃಷ್ಣ ಮಹಾಸಂಘದ ಶಾಖೆಯೊಂದು ಸ್ಥಾಪನೆಗೊಳ್ಳಬೇಕು ಎಂಬ ಉತ್ಕಟ ಭಾವನೆ ಮೂಡಿತು. ಭಕ್ತರ ಈ ಹಂಬಲದ ಪರಿಣಾಮವಾಗಿ ಚೆನ್ನೈನ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಶರ್ವಾನಂದರ ಮೂಲಕ ಮೈಸೂರಿನ ಆಶ್ರಮ ಆರಂಭವಾಯಿತು. ಈ ಆಶ್ರಮದ ಪ್ರಥಮ ಅಧ್ಯಕ್ಷರಾದವರು ಸ್ವಾಮಿ ಸಿದ್ಧೇಶ್ವರಾನಂದರು. ಮೊದಲಿಗೆ ಮರಿಮಲ್ಲಪ್ಪ ಪ್ರೌಢಶಾಲೆಯ ಬಳಿ, ನಂತರ ಕೃಷ್ಣಮೂರ್ತಿಪುರಂನ ಬಾಡಿಗೆ ಮನೆಗಳಲ್ಲಿ ಆಶ್ರಮವಿತ್ತು. ಮೈಸೂರು ಮಹಾರಾಜರ ಸೂಚನೆಯ ಮೇರೆಗೆ ನಗರಪಾಲಿಕೆಯು ೧೯೩೧ರಲ್ಲಿ ವಾಣಿವಿಲಾಸ ಮೊಹಲ್ಲದಲ್ಲಿ ೨ ಎಕರೆ ಜಾಗ ನೀಡಿತು. ದೇಣಿಗೆ ಸಂಗ್ರಹಿಸಿ ಸಣ್ಣ ಕಟ್ಟಡ ನಿರ್ಮಿಸಿ, ೧೯೩೨ ಫೆಬ್ರವರಿಯಲ್ಲಿ  ಆಶ್ರಮವು ಸ್ಥಳಾಂತರವಾಯಿತು. ಮುಂದೆ ರಾಮಕೃಷ್ಣ ಮಹಾಸಂಘದ ೧೩ನೇ ಅಧ್ಯಕ್ಷರಾದ ಸ್ವಾಮಿ ರಂಗನಾಥಾನಂದರೇ ಮೈಸೂರು ಆಶ್ರಮ ಸೇರಿದ ಮೊದಲ ಬ್ರಹ್ಮಚಾರಿ.

೧೯೨೯ರಲ್ಲಿ ಇಲ್ಲಿ ವಿದ್ಯಾರ್ಥಿಗಳ ವಸತಿ ಮಂದಿರ ಆರಂಭವಾಯಿತು. ೧೯೩೭ರಲ್ಲಿ ಶ್ರೀರಾಮಕೃಷ್ಣ ಮಂದಿರಕ್ಕೆ ಅಡಿಗಲ್ಲನ್ನು ಇಡಲಾಯಿತು. ೧೯೪೧ರಲ್ಲಿ ಪೊನ್ನಂಪೇಟೆ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಶಾಂಭವಾನಂದರು ಮೈಸೂರು ಆಶ್ರಮದ ಅಧ್ಯಕ್ಷರಾಗಿ  ಬಂದರು. ಒಂಟಿಕೊಪ್ಪಲಿನಲ್ಲಿ ೭೦ ಎಕರೆ ಜಾಗ ಪಡೆದು, ಸ್ವಾಮಿ ಶಾಂಭವಾನಂದರು ವಿದ್ಯಾರ್ಥಿಗಳ ವಸತಿ ಗೃಹವನ್ನು ನಿರ್ಮಿಸಿದರು. ಇದೇ ಪ್ರಸ್ತುತ ನಾಡಿನಾದ್ಯಂತ 'ಶ್ರೀರಾಮಕೃಷ್ಣ ವಿದ್ಯಾಶಾಲೆ' ಎಂದು ಪ್ರಸಿದ್ಧವಾಗಿರುವ ವಸತಿಶಾಲೆ.

ಮೌಲ್ಯಶಿಕ್ಷಣದ ತರಬೇತಿ ನೀಡಲು ಸ್ವಾಮಿ ಶಾಂಭವಾನಂದರು 'ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ' ಯನ್ನೂ ನಿರ್ಮಿಸಿದರು. ಇದು ಇಂದಿಗೂ ಸಮಾಜದ ವಿವಿಧ ಕ್ಷೇತ್ರಗಳ ಜನರಿಗೆ ವರ್ಷವಿಡೀ ಆಧ್ಯಾತ್ಮಿಕ ಶಿಬಿರಗಳನ್ನು ನಡೆಸುತ್ತಾ ಜ್ಞಾನ ಭಕ್ತಿಗಳ ಸಂಸ್ಕಾರ ನೀಡುತ್ತಿದೆ.

ಮೈಸೂರು ಆಶ್ರಮದ ಪ್ರಮುಖ ಅಂಗವಾದ ಪ್ರಕಾಶನ ವಿಭಾಗವು ೪೪೦ಕ್ಕೂ ಹೆಚ್ಚು ಕನ್ನಡ ಪುಸ್ತಕಗಳನ್ನು ಪ್ರಕಟಿಸಿ, ಜನಮಾನಸಕ್ಕೆ ಆಧ್ಯಾತ್ಮಿಕ ಜ್ಞಾನವು ತಲುಪುವ ನಿಟ್ಟಿನಲ್ಲಿ ಪರಿಣಾಮಕಾರಿಯಾದ ಪಾತ್ರವನ್ನು ವಹಿಸುತ್ತಿದೆ. ಸ್ವಾಮಿ ಸೋಮನಾಥಾನಂದರು ಈ ಪ್ರಕಾಶನ ವಿಭಾಗವನ್ನು ಕಟ್ಟಿ ಬೆಳೆಸಿದರು. ಆಶ್ರಮದ ನಿಕಟವರ್ತಿಗಳಾಗಿ ೧೩ ವರ್ಷ ಇಲ್ಲಿಯೇ ಇದ್ದ ರಾಷ್ಟ್ರಕವಿ ಕುವೆಂಪು ಅವರೂ ಅಮೂಲ್ಯ ಗ್ರಂಥಗಳನ್ನು ರಚಿಸಿ ಆಶ್ರಮಕ್ಕೆ ತಮ್ಮ ಸಾಹಿತ್ಯ ಸೇವೆಯನ್ನು ಸಲ್ಲಿಸಿದ್ದಾರೆ. ಜನವರಿ ೨೦೦೦ದಲ್ಲಿ ಆರಂಭವಾದ 'ವಿವೇಕಪ್ರಭ' ಆಧ್ಯಾತ್ಮಿಕ ಮಾಸಪತ್ರಿಕೆಯು ದಿವ್ಯತ್ರಯರ ಜೀವನ ಮತ್ತು ಸಂದೇಶಗಳನ್ನು ಸಮಾಜದಲ್ಲಿ ಯಶಸ್ವಿಯಾಗಿ ಪಸರಿಸುತ್ತಿದೆ.

ಬಹಳ ಹಿಂದೆಯೇ ಆಶ್ರಮವು ಪಡುವಾರಹಳ್ಳಿ, ಕುಂಬಾರ ಕೊಪ್ಪಲು ಎಂಬ ಗ್ರಾಮಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸುತ್ತಿತ್ತು. ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಬಡಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗುವ 'ವಿವೇಕ ಶಿಕ್ಷಣ' ಎಂಬ ಯೋಜನೆಯನ್ನು ಅನುಷ್ಠಾನಕ್ಕೆ ತಂದಿತು. ಹಳ್ಳಿಹಳ್ಳಿಗಳನ್ನು ತಲುಪುವ 'ಜ್ಞಾನವಾಹಿನಿ' ಎಂಬ ಅಭಿಯಾನವನ್ನು

ಆರಂಭಿಸಿ ಸಹಸ್ರಾರು ಗ್ರಾಮಸ್ಥರಿಗೆ ದಿವ್ಯತ್ರಯರ ಸಂದೇಶಗಳನ್ನು ಪರಿಣಾಮಕಾರಿಯಾಗಿ ತಿಳಿಸಿತು. ಮೈಸೂರು ಆಶ್ರಮವು ೨೦೧೯ರ ನವೆಂಬರ್‌ನಲ್ಲಿ ಚಾಮರಾಜನಗರದ ತೆಂಕಲಮೋಳೆ ಗ್ರಾಮದಲ್ಲಿ 'ಶ್ರೀರಾಮಕೃಷ್ಣ ಸೇವಾಮಂದಿರ' ವನ್ನು ಆರಂಭಿಸಿ, ಹಿಂದುಳಿದ ಗ್ರಾಮಗಳ ಮಕ್ಕಳಿಗೆ ಉಚಿತ ಶೈಕ್ಷಣಿಕ ತರಬೇತಿ ನೀಡುತ್ತಿದೆ.

## ಶ್ರೀರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆ

ಸುಂದರ ಕೊಡಗಿನಲ್ಲಿ ದಿವ್ಯತ್ರಯರ ಅಮೃತ ಆಧ್ಯಾತ್ಮಿಕ ಸಂದೇಶಗಳ ಪ್ರಭಾವಕ್ಕೆ ಒಳಗಾದ ಶ್ರೀ ಅಚ್ಚಿಯಂಡ ಕಾಳಮ್ಮಯ್ಯ, ಕೆ.ಜಿ. ಚೆಂಗಪ್ಪ, ಡಾ. ಎ.ಎಂ.ಮುತ್ತಪ್ಪರೆಂಬ ಭಕ್ತರು ಸ್ವಾಮಿ ನಿರ್ಮಲಾನಂದಜಿ ಅವರು ಧರ್ಮಪ್ರಚಾರಕ್ಕಾಗಿ ವಿರಾಜಪೇಟೆಗೆ ಬಂದಿದ್ದಾಗ ಅವರನ್ನು ಭೇಟಿಯಾದರು. ಶ್ರೀರಾಮಕೃಷ್ಣ ಮಹಾ ಸಂಘದ ಶಾಖೆಯೊಂದನ್ನು ಸ್ಥಾಪಿಸುವ ತಮ್ಮೆಲ್ಲರ ಸ್ವಪ್ನವನ್ನು ಸ್ವಾಮೀಜಿಯವರ ಮುಂದಿಟ್ಟರು. ಪೊನ್ನಂಪೇಟೆಯಲ್ಲಿ ಮೂರು ಎಕರೆ ಸ್ವಂತ ಜಾಗವನ್ನು ಅಚ್ಚಿಯಂಡ ಕಾಳಯ್ಯನವರು ಅರ್ಪಿಸಲು ಮುಂದಾದರು. ಸ್ವಾಮಿ ನಿರ್ಮಲಾನಂದರು, 'ಇದು ಶ್ರೀಗುರು



ಮಹಾರಾಜರ ಇಚ್ಛೆ' ಎಂದರು. ಸಾರ್ವಜನಿಕರ ಹೃತ್ಪೂರ್ವಕ ಬೆಂಬಲ ದೊರೆಯಿತು. ೧೯೨೭ರ ಫೆಬ್ರವರಿ ೭ರಂದು ಸ್ವಾಮಿ ನಿರ್ಮಲಾನಂದರು ಪೊನ್ನಂಪೇಟೆ ಶ್ರೀರಾಮಕೃಷ್ಣ ಶಾರದಾಶ್ರಮದ ಅಸ್ತಿಭಾರ ಶಿಲೆಯನ್ನು ಸ್ಥಾಪಿಸಿ, ಪ್ರಾರ್ಥಿಸಿ ಹರಸಿದರು. ಆಶ್ರಮದ ಕಟ್ಟಡ ನಿರ್ಮಾಣವಾದ ಬಳಿಕ ೧೯೨೭ ಜೂನ್ ೧೦ರಂದು ಅವರೇ ಶ್ರೀರಾಮಕೃಷ್ಣ ಶಾರದಾಶ್ರಮವನ್ನು ಉದ್ಘಾಟಿಸಿದರು. ಸ್ವಾಮಿ ಶಾಂಭವಾನಂದರು ಆಶ್ರಮದ ಪ್ರಥಮ ಅಧ್ಯಕ್ಷರಾದರು. ಕೊಡಗಿನಲ್ಲಿ ಹರಡಿದ್ದ ಭೀಕರ ಮಲೇರಿಯಾ ಕಾಯಿಲೆಯ ನಿರ್ಮೂಲನಾ ಕಾರ್ಯವನ್ನು ಕೈಗೊಂಡರು. ಸೊಳ್ಳೆ ಹಾಡನ್ನು ಕೊಡವ ಭಾಷೆಯಲ್ಲಿ ರಚಿಸಿ ಜನಜಾಗೃತಿ ಮೂಡಿಸಿದರು. ಜೇನು ಕೃಷಿಯ ಪ್ರಾಯೋಗಿಕ ಕೇಂದ್ರವನ್ನು ಆಶ್ರಮದಲ್ಲೇ ಆರಂಭಿಸಿದರು. ೧೯೩೬ರಲ್ಲಿ 'ಜೇನು ಮತ್ತು ಮೇಣ ಉತ್ಪಾದಕರ ಸಂಘ'ವನ್ನು ಸ್ಥಾಪಿಸಿದರು. ೧೯೩೪ರಲ್ಲಿ ಪ್ರವಾಸ ಮಾಡುವಾಗ ಮಹಾತ್ಮಾಗಾಂಧೀಜಿಯವರು ಈ ಆಶ್ರಮದಲ್ಲಿ ತಂಗಿ, ಆಶ್ರಮವು ಅಸ್ಪೃಶ್ಯರಿಗಾಗಿ ಸಲ್ಲಿಸುತ್ತಿದ್ದ ಸೇವೆಯನ್ನು ಕಂಡು ಮೆಚ್ಚಿ ಪ್ರಶಂಸಿಸಿದರು. ಮುಂದೆ ಆಚಾರ್ಯ ವಿನೋಬಾ ಭಾವೆಯವರೂ ಈ ಆಶ್ರಮಕ್ಕೆ ಭೇಟಿಕೊಟ್ಟು ತಂಗಿದ್ದರು.

ಕೊಡಗಿನಾದ್ಯಂತ ಶ್ರೀರಾಮಕೃಷ್ಣ ಶಾರದಾಶ್ರಮದ ಮುಖಾಂತರ ಆಧ್ಯಾತ್ಮಿಕ, ಸಾಮಾಜಿಕ, ನೈತಿಕ ಮತ್ತು ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ರಚನಾತ್ಮಕ ಯೋಜನೆಗಳು ಅನುಷ್ಠಾನಗೊಂಡವು. ೧೯೪೨ರಲ್ಲಿ ಹೋಮಿಯೋಪತಿ ಚಿಕಿತ್ಸಾ ಕೇಂದ್ರವನ್ನು ಆರಂಭಿಸಿ, ೧೯೪೭ರಲ್ಲಿ ಅಲೋಪತಿ ಚಿಕಿತ್ಸೆ ಮತ್ತು ಔಷಧಾಲಯವನ್ನು ಪ್ರಾರಂಭಿಸಲಾಯಿತು. ಪ್ರಸ್ತುತ ಈ ವಿಭಾಗವು ಚೆನ್ನಾಗಿ ಅಭಿವೃದ್ಧಿ ಹೊಂದಿ, ಜಿಲ್ಲೆಯಲ್ಲಿಯೇ ಒಂದು ಸುಸಜ್ಜಿತ ಆಸ್ಪತ್ರೆಯಾಗಿ ನಿಂತಿದೆ. ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಭಾಗವನ್ನೂ ಇದಕ್ಕೆ ಸೇರಿಸಲಾಗಿದೆ.

ಕಾಲಕಾಲಕ್ಕೆ ಸತ್ಸಂಗಗಳು, ಶಿಬಿರಗಳು, ಭಕ್ತಸಮ್ಮೇಳನಗಳು, ಆಧ್ಯಾತ್ಮಿಕ ಉಪನ್ಯಾಸಗಳನ್ನು ವ್ಯವಸ್ಥಿತವಾಗಿ ಆಶ್ರಮವು ನಡೆಸುತ್ತಿದೆ. ಉಚಿತ ವೈದ್ಯಕೀಯ ಶಿಬಿರಗಳನ್ನು ನಡೆಸಲಾಗುತ್ತಿದೆ. ೨೦೧೮ರಲ್ಲಿ ಕೊಡಗು ಪ್ರದೇಶವು ಭೀಕರ ಮಳೆಗೆ ತುತ್ತಾಗಿ ಭಾರೀ ಅನಾಹುತ ಎದುರಿಸಿತು. ಆ ಸಂಕಷ್ಟದ ಸಮಯದಲ್ಲಿ ಪೊನ್ನಂಪೇಟೆಯ ಶ್ರೀರಾಮಕೃಷ್ಣಶಾರದಾಶ್ರಮವು ಹಲವು ರೀತಿಯ ಪರಿಹಾರ ಕಾರ್ಯಕ್ರಮಗಳನ್ನು ನಡೆಸಿತು. ಹೀಗೆ ಈ ಆಶ್ರಮವು ಕೊಡಗಿನ ಜನರಲ್ಲಿ ಶ್ರದ್ಧಾಭಕ್ತಿಗಳನ್ನು ಉದ್ದೀಪಿಸಿ, ಭರವಸೆ ನೀಡುತ್ತಾ ದಿವ್ಯತ್ರಯರ ಸಂದೇಶಗಳನ್ನು ಹರಡುತ್ತಿದೆ.

## ರಾಮಕೃಷ್ಣ ಮಠ ಮತ್ತು ಮಿಷನ್, ಮಂಗಳೂರು.

೧೯೪೦ರ ದಶಕದಲ್ಲಿ ಸಾಹುಕಾರ್ ವೆಂಕಟೇಶ ಪೈ ಅವರು ಬಡಮಕ್ಕಳ ಕಲ್ಯಾಣಕ್ಕಾಗಿ ಮಂಗಳೂರಿಲ್ಲಿ ಒಂದು ಬಾಲಕಾಶ್ರಮವನ್ನು ಆರಂಭಿಸಿದರು. ಅಲ್ಲಿ ಉಚಿತ ಊಟ-ವಸತಿಗಳನ್ನು ಮಕ್ಕಳಿಗೆ ನೀಡಲಾಗುತ್ತಿತ್ತು. ಆ ಸಂದರ್ಭದಲ್ಲಿಯೇ ಮಂಗಳೂರಿನ ಶ್ರದ್ಧಾವಂತ ಜನತೆ ಶ್ರೀರಾಮಕೃಷ್ಣ ಮಠದ ಕೇಂದ್ರವೊಂದನ್ನು ತಮ್ಮ ಸ್ಥಳದಲ್ಲಿ ಪ್ರಾರಂಭಿಸುವಂತೆ ಬೇಲೂರು ಮಠಕ್ಕೆ ಮನವಿ ಮಾಡಿಕೊಂಡರು. ಈ ಕೋರಿಕೆಗೆ ಪ್ರತಿಸ್ಪಂದಿಸಿದ ಬೇಲೂರು ಮಠವು ಸ್ವಾಮಿ ವಿಮಲಾನಂದರನ್ನು ಕಳಿಸಿಕೊಟ್ಟಿತು. ಹೀಗೆ ೩ನೇ ಜೂನ್ ೧೯೪೭ ರಂದು ಮಂಗಳೂರಿನ ಲಾಲ್‌ಬಾಗಿನ ಒಂದು ಬಾಡಿಗೆ ಮನೆಯಲ್ಲಿ ಶ್ರೀರಾಮಕೃಷ್ಣ ಮಠವು ಆರಂಭವಾಯಿತು.

ನಿತ್ಯಪೂಜೆ, ಭಜನೆಗಳನ್ನು ನೆರವೇರಿಸುತ್ತಾ, ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ ಸ್ವಾಮಿ ವಿಮಲಾನಂದರು ಪ್ರವಚನಗಳನ್ನು ಮಾಡುತ್ತಾ ಮಂಗಳೂರಿನ ಶ್ರದ್ಧಾವಂತ ಜನರ ಮನಸ್ಸಿನಲ್ಲಿ ರಾಮಕೃಷ್ಣ-ವಿವೇಕಾನಂದ ವಿಚಾರಧಾರೆಯ ಬೀಜಗಳನ್ನು ಬಿತ್ತಿದರು.

ಸಾಹುಕಾರ ವೆಂಕಟೇಶ ಪೈ ಅವರ ಬಾಲಕಾಶ್ರಮವನ್ನು ಹಿಂದೂ ಸೇವಾಸಂಘ ವಹಿಸಿಕೊಂಡು ನಡೆಸುತ್ತಿತ್ತು. ಈಗ ಅವರು ಅದನ್ನು ರಾಮಕೃಷ್ಣ ಮಠಕ್ಕೆ ಒಪ್ಪಿಸಲು ಮುಂದಾದರು. ೧೦.೦೮.೧೯೫೧ ರಂದು ಏಳು ಎಕರೆ ಸುಂದರ ನಿವೇಶನ ಮತ್ತು ಬಾಲಕಾಶ್ರಮವನ್ನು ಸಾಹುಕಾರ ವೆಂಕಟೇಶ ಪೈ ಅವರು ರಾಮಕೃಷ್ಣ



ಮಹಾಸಂಘಕ್ಕೆ ಹಸ್ತಾಂತರಿಸಿದರು. ಈ ಜಾಗದಲ್ಲಿ ರಾಮಕೃಷ್ಣ ಮಠವು ಪೂಜೆ ಪ್ರವಚನಗಳನ್ನೂ ನಡೆಸುತ್ತಿತ್ತು. ಅದಕ್ಕೆ ಹೆಗಲೆಣೆಯಾಗಿ ಬಾಲಕಾಶ್ರಮವನ್ನು ರಾಮಕೃಷ್ಣ ಮಿಷನ್ ನಡೆಸತೊಡಗಿತು.

೧೯೫೫ರಲ್ಲಿ ಆಶ್ರಮವು ಒಂದು ಉಚಿತ ವೈದ್ಯಕೀಯ ಚಿಕಿತ್ಸಾಲಯವನ್ನು ಆರಂಭಿಸಿತು. ಜಾತಿಮತ ಭೇಧವಿಲ್ಲದೆ ಗಣ್ಯವೈದ್ಯರು ನಿಃಸ್ಪೃಹತೆಯಿಂದ ರೋಗಿಗಳ ಸೇವೆಗೆ ತಮ್ಮನ್ನು ತೊಡಗಿಸಿಕೊಂಡರು. ೧೯೬೩ ಸ್ವಾಮಿ ವಿವೇಕಾನಂದರ ಜನ್ಮ ಶತಾಬ್ದಿಯ ವರ್ಷ ಅದರ ಸವಿನೆನಪಿಗಾಗಿ ಬಾಲಕಾಶ್ರಮಕ್ಕೆ ಒಂದು ಕಟ್ಟಡವನ್ನು ನಿರ್ಮಿಸಲಾಯಿತು. ಆಧ್ಯಾತ್ಮಿಕ ಶಿಬಿರಗಳು, ವ್ಯಕ್ತಿತ್ವನಿರ್ಮಾಣ ಕಾರ್ಯಾಗಾರಗಳು, ಬೇಸಿಗೆ ಶಿಬಿರಗಳು, ಬಡಮಕ್ಕಳಿಗೆ ಶೈಕ್ಷಣಿಕ ತರಬೇತಿ ಕೇಂದ್ರ, ಉಚಿತ ಶಿಕ್ಷಣ ನೆರವು ನೀಡುತ್ತಿರುವ ಮಂಗಳೂರಿನ ರಾಮಕೃಷ್ಣ ಮಠ ಮತ್ತು ಮಿಷನ್ ೨೦೧೫ರಿಂದ ಅತ್ಯಂತ ವ್ಯವಸ್ಥಿತವಾಗಿ 'ಸ್ವಚ್ಛ ಮಂಗಳೂರು ಅಭಿಯಾನ'ವನ್ನು ಯಶಸ್ವಿಯಾಗಿ ನಡೆಸುತ್ತಾ ಜನಜಾಗೃತಿ ಮೂಡಿಸುತ್ತಿದೆ.

## ರಾಮಕೃಷ್ಣ ಮಠ, ಹಲಸೂರು, ಬೆಂಗಳೂರು

ಬೆಂಗಳೂರಿನ ಹಲಸೂರು ಪ್ರದೇಶದಲ್ಲಿ ಸ್ವಾಮಿ ವಿವೇಕಾನಂದರ ಗಾಢ ಪ್ರಭಾವಕ್ಕೆ ಒಳಗಾದ ಕೆಲವು ಭಕ್ತರು ಪ್ರಾರ್ಥನೆ, ಧ್ಯಾನ, ಸಾಧನೆಯನ್ನು ಒಟ್ಟುಗೂಡಿ ಮಾಡಲು ಒಂದು ಚಿಕ್ಕ ಕಟ್ಟಡದಲ್ಲಿ ವ್ಯವಸ್ಥೆ ಮಾಡಿಕೊಂಡರು. ಈ ಭಕ್ತ ಅಭೀಪ್ಸೆಗೆ ಸ್ಪಂದಿಸಿ ಸ್ವಾಮಿ ವಿಮಲಾನಂದಜಿ ಅವರು ೧೯೦೬ರ ಮೇ ತಿಂಗಳಲ್ಲಿ ಶ್ರೀರಾಮಕೃಷ್ಣರ ಭಾವಚಿತ್ರವನ್ನು ವಿಧ್ಯುಕ್ತವಾಗಿ ಪ್ರತಿಷ್ಠಾಪಿಸಿದರು. ಈ ಆಶ್ರಮವು ಬಸವನಗುಡಿ ರಾಮಕೃಷ್ಣ ಮಠದ ಒಂದು ಅಂಗವಾಗಿ ಬಹಳ ವರ್ಷ ಕಾರ್ಯಮಾಡಿತು. ಆದರೆ ೧೯೯೯ರ ಜನವರಿ ೧ರಿಂದ ಇದು ರಾಮಕೃಷ್ಣ ಮಹಾಸಂಘದ ನೇರವಾದ ಒಂದು ಶಾಖೆಯಾಗಿ ಕಾರ್ಯ ನಿರ್ವಹಿಸಲಾರಂಭಿಸಿದೆ. ಶಾಂತ, ಸುಂದರ ಮತ್ತು ಆತ್ಮೋದ್ದೀಪಕ ವಾತಾವರಣದ ಮಧ್ಯೆ ಇರುವ ಶ್ರೀರಾಮಕೃಷ್ಣ ಮಂದಿರವು ಧ್ಯಾನಮಾಡಲು, ನೀರವತೆಯಲ್ಲಿ ತಮ್ಮ ಆಂತರಿಕ ದಿವ್ಯತೆಯನ್ನು ಅರಸಲು ಸೂಕ್ತವಾದ ತಾಣವಾಗಿದೆ. ಈ ಮಠವು ನಿವೃತ್ತರಾದ ವೃದ್ಧ ಸಾಧುಸಂನ್ಯಾಸಿಗಳ ಕೇಂದ್ರವೂ ಆಗಿದೆ. ಆಧ್ಯಾತ್ಮಿಕ ಶಿಬಿರಗಳು, ದಿವ್ಯತ್ರಯರ ಜಯಂತಿಗಳು, ಹಲವು ಸಂತರ ಜನ್ಮದಿನಗಳನ್ನು ಮಠವು ಆಚರಿಸುತ್ತಿದೆ. ಬಡಜನತೆಗಾಗಿ ಉಚಿತ ನೇತ್ರ ಚಿಕಿತ್ಸಾ ಶಿಬಿರಗಳನ್ನು ನಡೆಸಿಕೊಂಡು ಬರುತ್ತಿದೆ. ಜನರಿಗೆ ವೈದ್ಯಕೀಯ ನೆರವು ನೀಡಲು ನಾಲ್ಕು ಅಂತಸ್ತಿನ ಔಷಧಾಲಯದ ಕಟ್ಟಡವನ್ನು ನಿರ್ಮಿಸಲಾಗಿದೆ. ಪ್ರತಿ ದಿನ ಮುಂಜಾನೆ ಸಾರ್ವಜನಿಕರಿಗೆ ಯೋಗಾಸನ ತರಬೇತಿ ನೀಡಲಾಗುತ್ತಿದೆ, ಪ್ರತಿ ಭಾನುವಾರ 'ಬಾಲಕ ಸಂಘ' ವನ್ನು ನಡೆಸುತ್ತಾ, ಮಕ್ಕಳಲ್ಲಿ ಸಾಂಸ್ಕೃತಿಕ ಮತ್ತು ನೈತಿಕ ಮೌಲ್ಯಗಳ ಸಂವರ್ಧನೆ ಮಾಡಲಾಗುತ್ತಿದೆ. ಯುವಜನತೆಗಾಗಿ 'ಯುವಕ ಸಂಘ'ವನ್ನು ನಡೆಸುತ್ತಾ ರಾಷ್ಟ್ರ ಭಕ್ತಿ, ರಾಷ್ಟ್ರಸೇವೆಯ ಮೌಲ್ಯಗಳ ಅರಿವು ಮೂಡಿಸಿ, ದಿವ್ಯತ್ರಯರ ಜೀವನ ಸಂದೇಶಗಳ ಅಧ್ಯಯನಕ್ಕೆ ಸೂಕ್ತ ಪರಿಸರವನ್ನು ನಿರ್ಮಿಸಲಾಗಿದೆ. 'ಬೇಸಿಗೆ ಶಿಬಿರ'ಗಳನ್ನು ಪ್ರತಿ ವರ್ಷವೂ ನಡೆಸುತ್ತಾ ಮಕ್ಕಳ ಬೆಳವಣಿಗೆಗೆ ಅಗತ್ಯವಾದ ಸಂಸ್ಕಾರಗಳನ್ನು ನೀಡು



ತ್ತಿರುವ ಹಲಸೂರಿನ ರಾಮಕೃಷ್ಣ ಮಠವು ಅತಿ ಚಟುವಟಿಕೆಗಳ ಬೆಂಗಳೂರು ನಗರದ ಜನರಿಗೆ ಶಾಂತಿಯನ್ನು ಆಧ್ಯಾತ್ಮಿಕ ಭರವಸೆಯನ್ನು ನೀಡುವ ಶ್ರದ್ಧಾ ಕೇಂದ್ರವಾಗಿದೆ.

## ಶ್ರೀರಾಮಕೃಷ್ಣ ಮಿಷನ್ ಆಶ್ರಮ, ಬೆಳಗಾವಿ

೧೮೯೨ರ ಅಕ್ಟೋಬರ್ ೧೫ರಂದು ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಭಾರತ ಪರ್ಯಟನೆ ಮಾಡುತ್ತಾ, ಬೆಳಗಾವಿಗೆ ಆಗಮಿಸಿ ಪಾದಸ್ಪರ್ಶ ಮಾಡಿದರು. ಶ್ರೀಸದಾಶಿವ ಬಾಲಕೃಷ್ಣ ಭಾಟೆ ಎಂಬುವರ ಮನೆಯಲ್ಲಿ ತಂಗಿದ್ದರು. ಈಗ ಅವರ ಮನೆ 'ಸ್ವಾಮಿ ವಿವೇಕಾನಂದ ಸ್ಮಾರಕ' ಎಂದು ಐತಿಹಾಸಿಕ ಸ್ಮಾರಕವಾಗಿದೆ. ಶ್ರೀ ಭಾಟೆಯವರು ಸ್ವಾಮಿ ವಿವೇಕಾನಂದರನ್ನು ತಮ್ಮ ಸ್ನೇಹಿತರಾದ ಹರಪದ ಮಿತ್ರ ಎಂಬುವರ ಮನೆಗೆ ಕರೆದುಕೊಂಡು ಹೋಗಿ ಪರಿಚಯಿಸಿದರು. ಸ್ವಾಮೀಜಿಯವರು ಅವರ ಮನೆಯಲ್ಲಿ ಒಂಬತ್ತು ದಿನ ತಂಗಿದ್ದರೆಂದು ಹರಿಪದ ಮಿತ್ರರೇ ತಿಳಿಸಿದ್ದಾರೆ. ೧೯೯೯ ರಲ್ಲಿ ರಾಮಕೃಷ್ಣ ಮಿಷನ್ ಈ ಮನೆಯನ್ನು ತಮಗೆ ವಹಿಸಿಕೊಡಬೇಕೆಂದು ಸರ್ಕಾರಕ್ಕೆ ಅಧಿಕೃತ ಮನವಿ ಮಾಡಿತು.

ಶ್ರೀ ನಂಜುಂಡಯ್ಯ ಎಂಬ ಸದ್ಭಕ್ತರು ಈ ದಾಖಲೆಗಳನ್ನು ಸಂಗ್ರಹಿಸಿ, ಸರ್ಕಾರದೊಡನೆ ಸಂಪರ್ಕ ಮಾಡುವ ವಿಚಾರದಲ್ಲಿ ಅಪಾರವಾಗಿ ಪರಿಶ್ರಮಿಸಿದರು. ಪೊನ್ನಂಪೇಟೆಯ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಪುರುಷೋತ್ತಮಾನಂದಜಿಯವರಿಗೆ ರಾಮಕೃಷ್ಣ ಮಠ ಮತ್ತು ಮಿಷನ್ ಆಡಳಿತ ಮಂಡಳಿಯು ಆ ನಿವೇಶನ ಮತ್ತು ಜಮೀನನ್ನು ವಹಿಸಿಕೊಳ್ಳಲು ಹೇಳಿತು. ೨೦೦೦ ಜೂನ್ ೧ ರಂದು ಈ ಹೊಣೆ ಹೊತ್ತು ಸ್ವಾಮಿ ಪುರುಷೋತ್ತಮಾನಂದರು ಫಲಹಾರಿಣಿ ಕಾಳೀಪೂಜೆಯ ದಿನ ಸರ್ಕಾರದಿಂದ ಕಟ್ಟಡ ಪಡೆದರು. ಕಟ್ಟಡ ಜೀರ್ಣೋದ್ಧಾರ ಕಾರ್ಯ ೬ ತಿಂಗಳವರೆಗೆ ನಡೆದು ಪೂರೈಸಿತು. ಈ ಆಶ್ರಮದ ಆವರಣದಲ್ಲಿ ದೇವಸ್ಥಾನದ ನಿರ್ಮಾಣಕಾರ್ಯವು ನಡೆದು, ೨೦೦೩ ಅಕ್ಟೋಬರ್‌ನಲ್ಲಿ ಪೂರ್ಣಗೊಂಡಿತು. ೨೦೦೮ರ ಜನವರಿ ೨೧ ರಿಂದ ೨೫ರ ವರೆಗೆ, ಐದು ದಿನಗಳ ಕಾಲ ಈ ಆಶ್ರಮದಲ್ಲಿ ಮಂದಿರದ ಉದ್ಘಾಟನಾ ಸಮಾರಂಭವು ವಿಜೃಂಭಣೆಯಿಂದ ನಡೆಯಿತು.



ವ್ಯಕ್ತಿತ್ವ ನಿರ್ಮಾಣ ಕಾರ್ಯಾಗಾರ, ಉಚಿತ ಕಣ್ಣಿನ ಆಸ್ಪತ್ರೆ, ವಿವೇಕಾನಂದ ಕಂಪ್ಯೂಟರ್ ಕೋಚಿಂಗ್, ಬಾಲಕ-ಬಾಲಕಿಯರ ಸಂಘ, ಯುವಕ ಸಂಘ, ಯೋಗಾಸನ ತರಬೇತಿ ತರಗತಿಗಳು, ಆಧ್ಯಾತ್ಮಿಕ ಶಿಬಿರ, ಮೂರು ತಿಂಗಳಿಗೊಮ್ಮೆ ಜಪಯಜ್ಞ, ಯುವ ಸಮಾವೇಶ, ಶಿಕ್ಷಕರ ಚಿಂತನಾ ಗೋಷ್ಠಿಗಳು ಮತ್ತು ಭಕ್ತಸಮ್ಮೇಳನ ಗಳನ್ನು ಆಶ್ರಮವು ನಡೆಸುತ್ತಿದೆ. ಹತ್ತು ಹಲವು ರೀತಿಯಲ್ಲಿ ತನ್ನ ಸಮಾಜಮುಖಿ ಸೇವಾಕಾರ್ಯಗಳನ್ನು ಹಮ್ಮಿಕೊಂಡು ಸೇವೆ ಸಲ್ಲಿಸುತ್ತಿದೆ. ಪ್ರತಿ ತಿಂಗಳೂ ೫೦ ಬಡ ಕುಟುಂಬಗಳಿಗೆ ದವಸ ಧಾನ್ಯಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ಇದನ್ನು 'ದ್ರವ್ಯ ಯಜ್ಞ' ಎಂದು ಕರೆದಿದ್ದಾರೆ. ಪ್ರತಿಭಾನ್ವಿತ ಬಡ ಮಕ್ಕಳಿಗೆ ಪ್ರತಿ ವರ್ಷವೂ ೧೪ರಿಂದ ೧೫ ಲಕ್ಷ ರೂಪಾಯಿ ಸಹಾಯಧನ ನೀಡ ಲಾಗುತ್ತಿದೆ.

### ರಾಮಕೃಷ್ಣ ಮಿಷನ್, ದಾವಣಗೆರೆ

೧೯೮೮ರಲ್ಲಿ ದಾವಣಗೆರೆಯ ಶ್ರೀರಾಮಕೃಷ್ಣ ಆಶ್ರಮವು ಸ್ಥಾಪಿತವಾಯಿತು. ಅಲ್ಲಿನ ಭಕ್ತರು ಈ ಆಶ್ರಮವು ಕಲ್ಕತ್ತದ ರಾಮಕೃಷ್ಣ ಮಹಾಸಂಘದ ಅಧಿಕೃತ ಕೇಂದ್ರವಾಗಬೇಕೆಂದು ಹಂಬಲಿಸಿ ಮನವಿ ಮಾಡಿದರು. ಅವರ ಕನಸು ನನಸಾಯಿತು. ದಾವಣಗೆರೆಯ ಆಶ್ರಮ ರಾಮಕೃಷ್ಣ ಮಹಾಸಂಘದ ಅಧಿಕೃತ ಕೇಂದ್ರವೆಂದು ಅಂಗೀಕಾರವಾಯಿತು. ಈಗ ಅದರ ಹೆಸರು 'ರಾಮಕೃಷ್ಣ ಮಿಷನ್' ಎಂದಾಗಿದೆ. ಆಧ್ಯಾತ್ಮಿಕ ಶಿಬಿರಗಳು, ಮೌಲ್ಯಶಿಕ್ಷಣ ತರಬೇತಿ, ಪ್ರಕೃತಿ ವಿಕೋಪ ಪರಿಹಾರ ಕಾರ್ಯ



ಗಳೇ ಮುಂತಾದ ಸೇವಾ ಕಾರ್ಯಗಳನ್ನು ಈ ಹೊಸಕೇಂದ್ರವು ಆಯೋಜಿಸಿ, ನಡೆಸುತ್ತಿದೆ.

### ರಾಮಕೃಷ್ಣ ಮಿಷನ್, ಶಿವನಹಳ್ಳಿ

ಬೆಂಗಳೂರು ರಾಮಕೃಷ್ಣ ಮಠದ ಮಾರ್ಗದರ್ಶನದಲ್ಲಿ ೧೯೮೫ ರಲ್ಲಿ 'ರಾಮಕೃಷ್ಣ ಗ್ರಾಮ ಕ್ಷೇಮ ಟ್ರಸ್ಟ್' ಅನ್ನು ಆರಂಭಿಸಲಾಯಿತು. ಬೆಂಗಳೂರಿನಿಂದ ೩೨ ಕಿ.ಮೀ.ದೂರದಲ್ಲಿರುವ ಶಿವನಹಳ್ಳಿಯ ಅಭಿ ವೃದ್ಧಿಯೇ ಇದರ ಉದ್ದೇಶವಾಗಿತ್ತು. ೧೯೯೬ರಲ್ಲಿ ಅದು 'ರಾಮ ಕೃಷ್ಣ ಮಿಷನ್' ಎಂಬ ಹೆಸರಿನಲ್ಲಿ ರಾಮಕೃಷ್ಣ ಮಹಾಸಂಘದ ಶಾಖೆ ಯಾಗಿ ಪರಿಣಮಿಸಿತು. ಇದರ ಆಶ್ರಯದಲ್ಲಿ ಎರಡು ಮಾಧ್ಯಮಿಕ ಶಾಲೆಗಳು ಮತ್ತು ಒಂದು ಶಿಶುವಿಹಾರ ನಡೆಯುತ್ತಿವೆ. ಇಲ್ಲಿ ಒಂದು ಆಸ್ಪತ್ರೆ ಗ್ರಾಮೀಣ ಜನರ ಆರೋಗ್ಯರಕ್ಷಣೆ ಮಾಡುತ್ತಿದೆ. ಇಲ್ಲಿ ಎರಡು ಮಹಿಳೆಯರ ಸಹಕಾರಿ ಡೈರಿಗಳು ಕಾರ್ಯವೆಸಗುತ್ತಿವೆ. ✽


*With Best Compliments From:*

**ASMET INDUSTRIES PRIVATE LIMITED**

(An ISO 9001:20215 Company)



Plot No. 503, 4th Phase
Peenya Industrial Area, bangalore - 560058

GSTIN : 29AAGCA2222H1ZY



Manufacture of heavy sheet metal fabrications, manufacture of silencers (muffers), tanks, metal handling equipmnet, gear box case and other fabricating items for engineering petro chemicals and other allied industires.

**Telephone no. 080-2836 2080 / 2836 7436**

E-mail: asmetind@gmail.com